ಶ್ರೀ ಟಿ. ಸುಬ್ರಹ್ಮಣ್ಯ.—ಎಲ್ಲ ರಸ್ತೆಗಳೂ ಪ್ರಾಮುಖ್ಯವಾದುವೇ. ಆದರೆ ಎಷ್ಟು ಹಣ ವಿರುತ್ತದೆಯೋ ಅಷ್ಟು ಕೆಲಸವನ್ನು ಮಾಡುತ್ತಾರೆ. ಈಗ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಬಂದಿವೆ. 60-61 ನೆಯ ಸಾಲಿನಲ್ಲಿ ಈ ಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತೇವೆಂದು ಎಕ್ಸಿಕ್ಯೂಟಿವ್ ಇಂಜಿನಿಯರು ಬರೆದಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಬ್ಲಿಕ್‌ವರ್ಕ್ಸ್ ಇಲಾಖೆಯವರು ತೆಗೆದುಕೊಳ್ಳುತ್ತಾರೆಂದು ಹೇಳಿದರೆ ನಮ್ಮ ಇಲಾಖೆಯಿಂದ ಏನು ಮಾಡಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯ.—ಸರ್ಕಾರ ಎಂದರೆ ಒಂದೇ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಿದರೂ ಅದೇ ಸರ್ಕಾರ, ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ ಮಾಡಿದರೂ ಅದೇ ಸರ್ಕಾರ. ಆದುದರಿಂದ ಎಕ್ಸಿಕ್ಯೂಟಿವ್ ಎಂಜಿನಿಯರು ಈಸಲ ಪ್ರಾಮುಖ್ಯತೆಯನ್ನು ಕೊಟ್ಟು ತೆಗೆದುಕೊಳ್ಳುತ್ತೇವೆಂದು ಬರೆದಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ತೆಗೆದುಕೊಳ್ಳದೆ ಹೋದರೆ ಹೆಚ್ಚು ಗಮನ ಕೊಟ್ಟು ತೆಗೆದುಕೊಳ್ಳಲು ಏರ್ಪಾಡುಮಾಡುತ್ತೀರಾ?

ಶ್ರೀ ಟಿ. ಸುಬ್ರಹ್ಮಣ್ಯ.—ಇನ್ನು ಮುಂದೆ ತಾಲ್ಲೂಕ್ ಬೋರ್ಡಿನವರು ತೆಗೆದುಕೊಳ್ಳಬೇಕು. ನಾವು ಗ್ರಾಂಟ್ ಮಾತ್ರ ಕೊಡುತ್ತೇವೆ. Executive authority ತಾಲ್ಲೂಕ್ ಬೋರ್ಡ್ ಆಗುತ್ತದೆ,

———

Refund of Deposit Amount of Rangapur Math in Tiptur Taluk.

*Q.—179. **Sri K. P. REVANNASIDDAPPA** (Tiptur).—

Will the Government be pleased to state :—

(*a*) the period that has elapsed since the authorities of the Rangapur Math in Tiptur Taluk credited a sum of Rs. 2,000 in the Government Treasury towards construction of a Middle School building;

(*b*) whether it is a fact that due to delay on the part of Government in constructing that building, the authorities of that Math themselves got the same constructed and that they have been asking for refund of the money credited by them;

(*c*) the reasons for the delay in refunding the money deposited by them?

*A.—**Sri ANNA RAO GANAMUKHI** (Minister for Education).—

(*a*) About 10½ years.

(*b*) The Math authorities credited the amount without the permission of the Department. As the Department was not consulted it had not promised to sanction any grant when the construction of the building was taken up by the Management. Hence there is no question of delay on the part of the Government regarding the completion of the work.

(*c*) The question of obtaining Non-payment Certificate was under correspondence.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಾಮಾನ್ಯವಾಗಿ ಜನ ಮುಂದೆ ಬಂದು ಸ್ಕೂರ್ ಕಟ್ಟಡಕ್ಕೆ ದುಡ್ಡು ಕೊಡುವುದೇ ಕಷ್ಟ. ಅಂಥದ್ದರಲ್ಲಿ ಎರಡುಸಾವಿರ ರೂಪಾಯಿ ಡಿಪಾಸಿಟ್ ಮಾಡಿ 10–12 ವರ್ಷವಾದರೂ ಮಿಡಲ್ ಸ್ಕೂರ್ ಕಟ್ಟಡ ಕಟ್ಟಿಕೊಡಲು ಆಗದೆ ಇದ್ದರೆ ಸಾಮಾನ್ಯ ಜನರು ಸರ್ಕಾರದಲ್ಲಿ ಯಾವ ರೀತಿ ನಂಬಿಕೆ ಇಡುತ್ತಾರೆ?

† ಶ್ರೀ ಅಣ್ಣಾರಾವ್ ಗಣಮುಖಿ.—ಸರ್ಕಾರಕ್ಕೆ ಹೇಳದೆ ಕೇಳದೆ ತಾವಾಗಿಯೇ ದಾಖಲು ಮಾಡಿಕೊಂಡಿದ್ದಾರೆ. ಸರ್ಕಾರಕ್ಕೆ ಆ ವಿಷಯವೇ ಗೊತ್ತಿರಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಹೇಳಿ ಕೇಳಿ ಎಲ್ಲ ಮಾಡಿದರು, ಸರ್ಕಾರದವರು ಸರಿಯಾದ ಕಾಲದಲ್ಲಿ ಕಟ್ಟಲಿಲ್ಲವೆಂದು ಅವರೇಕಟ್ಟಿದರು. ಈಗ ನಮ್ಮ ಹಣವನ್ನು ವಾಪಸು ಕೊಡಿ ಎಂದು ಕೇಳಿ ಏಳೆಂಟು ವರ್ಷಗಳಾದರೂ ಕೊಡದೆ ಇದ್ದರೆ ಜನರಿಗೆ ಸರ್ಕಾರದಲ್ಲಿ ಯಾವ ರೀತಿ ನಂಬಿಕೆ ಬರುತ್ತದೆ?

ಶ್ರೀ ಅಣ್ಣಾರಾವ್ ಗಣಮುಖಿ.—ಈಗಾಗಲೇ ಬಿಲ್ ತಯಾರುಮಾಡಿ ಕಳಿಸಿದ್ದಾರೆ. ಹಣ ಈಗ ಸಿಕ್ಕುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನುಮಾರು ಎಷ್ಟು ವರ್ಷಗಳಲ್ಲಿ ಸಿಕ್ಕಬಹುದು?

ಶ್ರೀ ಅಣ್ಣಾರಾವ್ ಗಣಮುಖಿ.—ಆದಷ್ಟು ತೀವ್ರವಾಗಿ ಕೊಡಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ವರ್ಷದಲ್ಲಿ ಸಿಕ್ಕುತ್ತದೆಯೇ ಅಥವಾ ಎರಡು ವರ್ಷಗಳಲ್ಲಿ ಸಿಕ್ಕುತ್ತದೆಯೇ?

ಅಧ್ಯಕ್ಷರು.—ಆದಷ್ಟು ತೀವ್ರ ಸಿಕ್ಕುತ್ತದೆ ಎಂದು ಹೇಳಿದ್ದಾರೆ.

———

Polytechnic Institutions in the State

*Q.—372. **Sri A. R. KARISIDDAPPA** (Arsikere).—

Will the Government be pleased to state :—

(*a*) the number of Polytechnic Institutions in the State;

(*b*) the number of students that come out from these Institutions every year?

A.—Sri ANNA RAO GANAMUKHI (Minister for Education).—

(*a*) 23.

(*b*)—

Sl No.	*Year*	*Total Intake*	*No. of students who passed out*
1	1956-57 ...	1459	725
2	1957-58 ...	1835	784
3	1958-59 ...	2836	963

ಅಧ್ಯಕ್ಷರು.—ಮೊದಲನೆಯ ಪ್ರಶ್ನೆಗೆ ಉತ್ತರ ಬಂದಿದೆ. (*b*) ಗೆ ಮಾತ್ರ ಉಪಪ್ರಶ್ನೆಗಳನ್ನು ಕೇಳಿ.

Sri A. R. KARISIDDAPPA.—With reference to answer (*b*) do the Government consider the question of expanding technical education in the State?

† Sri ANNA RAO GANAMUKHI.—We are doing it.

Sri A. R. KARISIDDAPPA.—May I know the number that are going to be increased with a view to expand technical education?

Sri ANNA RAO GANAMUKHI.—Five more are going to be opened in the next academic year.

ಶ್ರೀ ಜಿ. ಶಿವಪ್ಪ.—ಈಗ ನಮ್ಮ ದೇಶದಲ್ಲಿ 19ಜಿಲ್ಲೆಗಳಿವೆ. 23 ಇಂಡಸ್ಟ್ರಿಟ್ಯೂಷನ್‌ಗಳು ಇವೆ. ಎರಡೆರಡು ಇಂಡಸ್ಟ್ರಿಟ್ಯೂಷನ್‌ಗಳು ಯಾವ ಯಾವ ಜಿಲ್ಲೆಯೊಳಗೆ ಇವೆ ಎಂಬುದನ್ನು ಹೇಳುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಎರಡೆರಡು ಇಂಡಸ್ಟ್ರಿಟ್ಯೂಷನ್‌ಗಳು ಇವೆ.

ಶ್ರೀ ಜಿ. ಶಿವಪ್ಪ.—ನರ್ಕಾರದವರು ಒಂದೊಂದು ಇಂಡಸ್ಟ್ರಿಟ್ಯೂಷನ್ ಇರತಕ್ಕ ಜಿಲ್ಲೆಗಳಿಗೆ ಎರಡು ಇಂಡಸ್ಟ್ರಿಟ್ಯೂಷಗಳನ್ನು ಕೊಡಲಕ್ಕೆ ಯಾವಾಗ ಪ್ರಯತ್ನ ಮಾಡುತ್ತೀರಿ?

ಶ್ರೀ ಅಣ್ಣಾರಾವ್ ಗಣಮುಖಿ.—ಯಾವಾಗ ಆವಶ್ಯಕತೆ ಬರುತ್ತದೋ ಆಗ ಮತ್ತು ಪ್ಲಾನ್ ಪ್ರಕಾರ ಯಾವಾಗ ಸಿಕ್ಕುತ್ತದೋ ಆಗ ಎರಡು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಶಿವಪ್ಪ.—ಪೂರ್ತಿ ಇಲ್ಲದೆ ಇರುವ ಜಿಲ್ಲೆಗಳು ಯಾವುವು?

ಶ್ರೀ ಅಣ್ಣಾರಾವ್ ಗಣಮುಖಿ.—ಮಂಡ್ಯ, ಬೀದರ್, ಕೂರ್ಗ್, ಮತ್ತು ರಾಯಚೂರ್.

Sri G. B. SHANKAR RAO.—The number of students who passed out during the year 1959 is low. The percentage of those who passed in 1958-59 as compared to the percentage of students who passed in the previous two years is low. Will the Government tell us the reasons why such small number of persons passed?

Sri ANNA RAO GANAMUKHI.—The institutions have also increased. That may be the reason.

Sri A. R. KARISIDDAPPA.—The Hon'ble Minister said so many times in this House that every District will be provided with one polytechnic. May I know how these 23 institutions have been distributed in the 19 districts?

ಅಧ್ಯಕ್ಷರು.—ಆಗಲೇ ಕೋಲಾರ ಮತ್ತು ಬೆಂಗಳೂರಿನಲ್ಲಿ ಎರಡು ಇವೆ ಎಂದು ಹೇಳಿದ್ದಾರೆ.

Sri A. R. KARISIDDAPPA.—May I know the reasons why those two districts were provided with more than one?

Sri ANNA RAO GANAMUKHI.—They were given.

Sri M. C. NARASIMHAN.—Does not the Government consider that the percentage of passes is rather low for a technical institution?

Sri ANNA RAO GANAMUKHI.—There cannot be any comparison between the intake capacity of the institution and who register themselves as fresh entrants with the results.

Sri C. J. MUCKANNAPPA.—Will the allotment of polytechnics depend upon the population of the District or merely because it is a District?

Sri ANNA RAO GANAMUKHI.—The disparity between population from district to district may be higher or lower. But at the same time, every district needs one polytechnic

Sri M. C. NARASIMHAN.—You say they are not comparable figures and they give a wrong impression. I want to know the basis, whether it is calculated on the total intake or the number who appeared for the examination.

Sri ANNA RAO GANAMUKHI.—The relationship in regard to the number of students who appeared has nothing to do with the total intake.

Sri M. C. NARASIMHAN.—What is the number of passes in reference to these who appeared to the examination?

Sri ANNA RAO GANAMUKHI.—That is not available now.